3

# ಯೋಹಾನನು ಬಾಪ್ತಿಸ್ಮವನ್ನು ಬೋಧಿಸಿದನು

*“ಬಾಪ್ತಿಸ್ಮದ ಯೋಹಾನನು ಅರಣ್ಯದಲ್ಲಿ ಪಾಪಗಳ ಕ್ಷಮಾಪಣೆಗಾಗಿ ಮಾನಸಾಂತರದ ಬಾಪ್ತಿಸ್ಮವನ್ನು ಸಾರುತ್ತಾಬಂದನು” (ಮಾರ್ಕ 1:4).*

ಯೋಹಾನನಿಂದ ಬೋಧಿಸಲ್ಪಟ್ಟು ರೂಢಿಸಲ್ಪಟ್ಟ ಸಿದ್ಧತೆಯ ಬಾಪ್ತಿಸ್ಮವು ಕೇವಲ ಕುರುಡು ವಿಧೇಯತೆಯ ಬಾಪ್ತಿಸ್ಮ ಒಂದು ಸಂಕೇತ ಇಲ್ಲವೇ ತಿಳುವಳಿಕೆ, ಮತ್ತು ಸಮರ್ಪಣೆಯಿಲ್ಲದ ಬರಿದಾದ ಧಾರ್ಮಿಕ ಆಚರಣೆ ಆಗಿರಲಿಲ್ಲ. ಅದರ ಉದ್ದೇಶವನ್ನೂ ಅರ್ಥವನ್ನೂ ತಿಳಿದು ಕೊಂಡವರಿಗಾಗಿ ಇದ್ದ ಬಾಪ್ತಿಸ್ಮವಾಗಿತ್ತು.

ಮಹಾ ದೇವಭಕ್ತನಾದ ಯೋಹಾನನು (ಮತ್ತಾಯ 11:11), ಯಾಜಕನಾದ ಜಕರೀಯ ಹಾಗೂ ಅವನ ಹೆಂಡತಿ ಎಲಿಜಬೇತಳಿಗೆ ಅವರ ವೃದ್ಧಾಪ್ಯದಲ್ಲಿ ಜನಿಸಿದ್ದನು (ಲೂಕ 1:5-7, 57). ಅವನು ತನ್ನ ಬಂಧುವಾದ ಯೇಸುವಿಗಿಂತ ಆರು ತಿಂಗಳು ದೊಡ್ಡವನು (ಲೂಕ 1:36). ಯೋಹಾನನು ಯೊರ್ದನ್ ನದಿಯ ಸಮೀಪದ ಯೂದಾಯದ ಅಡವಿಯಲ್ಲಿ ಬೋಧಿಸಲು ಪ್ರಾರಂಭಿಸಿದನು (ಮಾರ್ಕ 1:4, 5). ಸುಮಾರು ಮೂವತ್ತು ವರ್ಷ ವಯಸ್ಸಿನವನಾಗಿದ್ದನು. ಯೇಸು ಬಾಪ್ತಿಸ್ಮ ಹೊಂದುವ ಆರು ತಿಂಗಳ ಮೊದಲು ಅವನು ತನ್ನ ಸೇವೆ ಪ್ರಾರಂಭಿಸಿದನು (ಲೂಕ 3:21-23).

ಯೋಹಾನನ ಸೇವೆಯ ಮತ್ತು ಬಾಪ್ತಿಸ್ಮದ ಉದ್ದೇಶವನ್ನು (1) ಅವನ ಕೆಲಸವನ್ನು ಕುರಿತ ಪ್ರವಾದನೆ, (2) ಅವನ ಬೋಧನೆ, ಹಾಗೂ (3) ಅವನು ಬಾಪ್ತಿಸ್ಮ ಮಾಡಿಸಿದ ಜನರ ಪ್ರತ್ಯುತ್ತರ - ಇವುಗಳ ಅಧ್ಯಯನದಿಂದ ತಿಳಿದು ಕೊಳ್ಳಬಹುದು.

## ಯೋಹಾನನನ್ನು ಕುರಿತ ಪ್ರವಾದನೆ

ಕರ್ತನಿಗಾಗಿ ಮಾರ್ಗ ಸಿದ್ಧಮಾಡಲು ಅಡವಿಯಲ್ಲಿ ಕೂಗುವ ಶಬ್ದವು ಅವನಾಗಿರುವನೆಂದು ಯೋಹಾನನನ್ನು ಕುರಿತು ಯೆಶಾಯನು ಬರೆದನು (ಯೆಶಾಯ 40:3; ಇದು ಮತ್ತಾಯ 3:3; ಲೂಕ 3:4; ಯೋಹಾನ 1:23ರಲ್ಲಿ ಉಲ್ಲೇಖಿಸಲ್ಪಟ್ಟಿದೆ). ಕರ್ತನಿಗಾಗಿ ಮಾರ್ಗಸಿದ್ಧಮಾಡಲು ಅವನು ದೇವರ ದೂತನಾಗಿರುವನೆಂದು ಮಾಲಾಕಿಯನು ಪ್ರವಾದಿಸಿದನು (ಮಲಾಕಿ 3:1; ಹೋಲಿಸು. ಮತ್ತಾಯ 11:10; ಲೂಕ 1:76; 7:27). “(ಕರ್ತನು) ಬಂದು ದೇಶವನ್ನು ಹತಮಾಡದಂತೆ ... ಅವನು (ಈ ಪ್ರವಾದಿಯು) ತಂದೆಗಳ ಮನಸ್ಸನ್ನು ಮಕ್ಕಳ ಕಡೆಗೂ ಮಕ್ಕಳ ಮನಸ್ಸನ್ನು ತಂದೆಗಳ ಕಡೆಗೂ ತಿರುಗಿಸುವನು” ಎಂದು ಈ ಪ್ರವಾದಿಯನ್ನು ಕುರಿತು ಆತನು ಹೇಳಿದನು (ಮಲಾಕಿ 4:5, 6; ಹೋಲಿಸು. ಲೂಕ 1:17; ಮತ್ತಾಯ 11:14; 17:10, 11; ಮಾರ್ಕ 9:11-13).

ಯೋಹಾನನ ಜನನಕ್ಕಿಂತ ಮೊದಲು, ಗಬ್ರಿಯೇಲ ದೇವದೂತನು ಜಕರೀಯನಿಗೆ ಹೀಗೆ ಹೇಳಿದನು, “ಇಸ್ರಾಯೇಲ್ಯರಲ್ಲಿ ಅನೇಕರನ್ನು ಅವರ ದೇವರಾಗಿರುವ ಕರ್ತನ ಕಡೆಗೆ ತಿರುಗಿಸುವನು. ಅವನು ಆತನ ಮುಂದೆ ಹೋಗಿ ಎಲೀಯನ ಗುಣ ಶಕ್ತಿಗಳಿಂದ ಕೂಡಿದವನಾಗಿ ತಂದೆಗಳ ಹೃದಯವನ್ನು ಮಕ್ಕಳ ಕಡೆಗೂ ಹಟ ಹಿಡಿದವರನ್ನು ನೀತಿ

ವಂತರ ಜ್ಞಾನದ ಕಡೆಗೂ ತಿರುಗಿಸಿ ಸಿದ್ಧವಾದ ಜನವನ್ನು ಕರ್ತನಿಗೆ ಒದಗಿಸುವನು" (ಲೂಕ 1:16, 17; ಹೋಲಿಸು. ಮಲಾಕಿ 4:6). ಯೇಸು ಯೋಹಾನನನ್ನು ಬರಲಿಕ್ಕಿದ್ದ ಎಲೀಯನೆಂದು ಗುರುತಿಸಿದನು (ಮತ್ತಾಯ 11:11-14; 17:11-13). ಯೋಹಾನನು ಹಳೇ ಒಡಂಬಡಿಕೆಯ ಪ್ರವಾದಿ ಎಲೀಯನಾಗಿರಲಿಲ್ಲ (ಯೋಹಾನ 1:21); ಆದರೆ ಅವನು ಎಲೀಯನ ಗುಣ ಶಕ್ತಿಗಳಿಂದ ಕೂಡಿದವನಾಗಿ ಬಂದನು (ಲೂಕ 1:17).

ಯೋಹಾನನ ಪರಿಚರ್ಯವು ಕರ್ತನ ಬರೋಣಕ್ಕಾಗಿ ಸಿದ್ಧಪಡಿಸುವದರಲ್ಲಿ ತಮ್ಮ ಜೀವಿತಗಳನ್ನು ಸುಧಾರಿಸಿಕೊಳ್ಳಬೇಕೆಂದು ಇಸ್ರಾಯೇಲ್ಯರನ್ನು ಒತ್ತಾಯ ಪಡಿಸುವದಾಗಿತ್ತು (ಮಲಾಕಿ 3:1).

## ಯೋಹಾನನ ಉಪದೇಶ

ಯೋಹಾನನ ಸಂದೇಶವು, "ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿ ಕೊಳ್ಳಿರಿ" (ಮತ್ತಾಯ 3:1, 2) ಎಂಬುದಾಗಿತ್ತು. ಅವನ ಸೇವೆಯು, "ಪಾಪಗಳ ಕ್ಷಮಾಪಣೆಗಾಗಿ ಮನಸಾಂತರದ ಬಾಪ್ತಿಸ್ಮವನ್ನು" ಸಾರಿ ಹೇಳುವುದನ್ನು ಒಳಗೊಂಡಿತ್ತು (ಲೂಕ 3:3).

ಯಥಾರ್ಥತೆಯಿಲ್ಲದೆ ಅವನ ಬಾಪ್ತಿಸ್ಮಕ್ಕೆ ಬಂದವರನ್ನು ಯೋಹಾನನು ಗದರಿಸಿದನು. ಅವರನ್ನು ಸರ್ಪ ಜಾತಿಯವರೇ ಎಂದು ಕರೆದನು. ಅವರ ಮನಸ್ಸು ದೇವರ ಕಡೆಗೆ ತಿರುಗಿತೆಂಬುದನ್ನು ತಕ್ಕ ಫಲಗಳಿಂದ ತೋರಿಸಬೇಕೆಂದು ಹೇಳಿದನು (ಲೂಕ 3:7, 8). ಅವನ ಬಾಪ್ತಿಸ್ಮ ಪಡೆಯಲು ಬಂದವರಿಗೆ ಅವರು ನಂಬಬೇಕಾಗಿದ್ದ, ಬರಲಿಕ್ಕಿದ್ದ ಮೆಸ್ಸೀಯನಿಗಾಗಿ ಸಿದ್ಧರಾಗುವಲ್ಲಿ ತಮ್ಮ ಜೀವನಗಳನ್ನು ಬದಲಾಯಿಸಬೇಕೆಂದು ವಿನ್ನವಿಸಿದನು (ಅಪೊಸ್ತಲರ ಕೃತ್ಯ 19:4). ಯೇಸುವು ಮೆಸ್ಸೀಯನಾಗಿರುವನೆಂಬುದಕ್ಕೆ ಸಾಕ್ಷಿ ಕೊಡಲು ಬಾಪ್ತಿಸ್ಮ ಮಾಡಿಸುತ್ತಾ ಬಂದನು (ಯೋಹಾನ 1:31-34). ಪರಿಶುದ್ಧಾತ್ಮನು ದೇಹಾಕಾರವಾಗಿ ಪಾರಿವಾಳದ ಹಾಗೆ ಯೇಸುವಿನ ಮೇಲೆ ಇಳಿದು ಬಂದದ್ದನ್ನು ನೋಡಿದ ತರುವಾಯ ಅವನು ಸಾಕ್ಷಿ ಕೊಡಬಲ್ಲವನಾದನು (ಲೂಕ 3:21, 22).

ತಾನು ಎಲೀಯನೂ ಅಲ್ಲ, ಬರಬೇಕಾದ ಮೆಸ್ಸೀಯನೂ ಅಲ್ಲವೆಂದು ಯೋಹಾನನು ಬೋಧಿಸಿದನು (ಯೋಹಾನ 1:20, 21). ತಾನು ಮೆಸ್ಸೀಯನಿಗಾಗಿ ಮಾರ್ಗ ಸಿದ್ಧಮಾಡಲು ಕಳುಹಿಸಲ್ಪಟ್ಟ ಮುಂದೂತನೆಂದೂ, ಬರಲಿಕ್ಕಿದ್ದಾತನು ತನಗಿಂತ ದೊಡ್ಡವನಾಗಿರುವನೆಂದು ಹೇಳಿದನು. ಯೋಹಾನನಾಗಲೀ ಬೇರೆ ಯಾರೇ ಆಗಲೀ ಮಾಡದಿರುವದನ್ನು - ಪರಿಶುದ್ಧಾತ್ಮನಲ್ಲಿಯೂ ಬೆಂಕಿಯಲ್ಲಿಯೂ ಬಾಪ್ತಿಸ್ಮ ಮಾಡಿಸುವದನ್ನು ಮೆಸ್ಸೀಯನು ಮಾಡುವನೆಂದು ಅವನು ಹೇಳಿದನು (ಲೂಕ 3:16, 17).

## ಯೋಹಾನನಿಂದ ಬಾಪ್ತಿಸ್ಮ ಹೊಂದಿದವರು

ಯೋಹಾನನ ಬಾಪ್ತಿಸ್ಮವನ್ನು ಪಡೆಯಲು ಬಂದ ಜನರು ತಮ್ಮ ಪಾಪಭರಿತತೆಯನ್ನು ಅರ್ಥ ಮಾಡಿಕೊಂಡರು. ಯಾಕಂದರೆ ಅವರು ತಮ್ಮ ಪಾಪಗಳನ್ನು ಅರಿಕೆ ಮಾಡುತ್ತ ಬಂದರು (ಮಾರ್ಕ 1:5). ದೇವರ ರಾಜ್ಯವು ಸಮೀಪವಾಗಿರುವ ಸಂದೇಶವನ್ನು ಅವರು ಸ್ವೀಕರಿಸಿದರು. ತನ್ನ ಹಿಂದೆ ಒಬ್ಬಾತನು ಬರುವನೆಂದು ಯೋಹಾನನು ಹೇಳಿದಾತನಲ್ಲಿ ನಂಬಿಕೆಯಿಟ್ಟರು. ತಮ್ಮ ಪಾಪಗಳಿಗಾಗಿ ಮಾನಸಾಂತರ ಪಟ್ಟರು. ಯೋಹಾನನಿಂದ ವಾಗ್ದಾನ ಮಾಡಲ್ಪಟ್ಟ ಶುದ್ಧೀಕರಣವನ್ನು ಅಪೇಕ್ಷಿಸಿದರು. ತಮ್ಮ ಪಾಪಗಳನ್ನು ಅರಿಕೆ ಮಾಡುವದರಿಂದ (ಮತ್ತಾಯ 3:6) ಹಾಗೂ ಏನು ಮಾಡಬೇಕೆಂದು ಕೇಳುವದರಿಂದ (ಲೂಕ 3:10-14) ಯೋಹಾನನ

ಸಂದೇಶಕ್ಕೆ ಅನುಗುಣವಾಗಿ ತಮ್ಮ ಜೀವಿತಗಳನ್ನು ಬದಲಾಯಿಸಲು ಹುಡುಕುವದನ್ನೂ ಮಾನಸಾಂತರ ಪಡುತ್ತಿರುವದನ್ನೂ ಅವರು ಸೂಚಿಸಿದರು. ಬಾಪ್ತಿಸ್ಮ ಹೊಂದುವದರಿಂದ ಯೋಹಾನನ ಸಂದೇಶದಲ್ಲಿ ಒಳಗೊಂಡಿರುವದೆಲ್ಲವನ್ನೂ ತಾವು ಸ್ವೀಕರಿಸುವೆವೆಂದು ಪ್ರದರ್ಶಿಸಿದರು.

ಯೋಹಾನನು ಅವರ ಮೇಲೆ ಹಾಕಿದ ಬೇಡಿಕೆಗಳು ಕೇವಲ ಬಾಪ್ತಿಸ್ಮದ ದೈಹಿಕ ಪ್ರತ್ಯುತ್ತರವನ್ನು ಮಾತ್ರವೇ ಕೇಳುತ್ತಿರುವದಿಲ್ಲ ಆದರೆ ಮಾನಸಾಂತರವನ್ನೂ ಆತನ ಸಂದೇಶಕ್ಕೆ ಅರ್ಥ ಗರ್ಭಿತವಾದ ಪ್ರತ್ಯುತ್ತರವಾಗಿ ಬಾಪ್ತಿಸ್ಮವನ್ನು ಹುಡುಕುತ್ತವೆ (ಲೂಕ 3:3; ಅಪೊಸ್ತಲರ ಕೃತ್ಯ 13:24).

## ಯೋಹಾನನ ಸೇವೆ

ಯೋಹಾನನು ಏನನ್ನು ಮಾಡಲು ಪ್ರಯತ್ನಿಸುತ್ತಿದ್ದನು? ಜನರಿಗೆ ಬಾಪ್ತಿಸ್ಮ ಮಾಡಿಸುವುದೇ ಅವನ ಏಕೈಕ ಉದ್ದೇಶವಾಗಿತ್ತೋ? ಬಾಪ್ತಿಸ್ಮ ಹೊಂದುವವರಿಂದ ಅವರು ದೇವರಲ್ಲಿ ವಿಶ್ವಾಸ ವಿಟ್ಟಿದ್ದೇವೆಂದು ಅವರು ಸಿದ್ಧಪಡಿಸಿ ತೋರಿಸಬೇಕೆಂದು ಅವನು ಬಯಸಿದನೋ? ತಾವು ದೇವರಿಗೆ ವಿಧೇಯರಾಗಲು ಇಷ್ಟವುಳ್ಳವರಾಗಿದ್ದೇವೆಂದು ಮಾತ್ರವೇ ಸಿದ್ಧಪಡಿಸಿ ತೋರಿಸಬೇಕಾಗಿತ್ತೋ? ಅವರು ಕ್ಷಮಿಸಲ್ಪಟ್ಟಿದ್ದಾರೆ, ಧಾರ್ಮಿಕ ಗುಂಪಿನೊಳಗೆ ಸೇರಿಸಲ್ಪಟ್ಟಿದ್ದಾರೆ. ಇಲ್ಲವೇ ದೇವರ ಕಾರ್ಯಕ್ಕೆ ತಮ್ಮನ್ನು ಪ್ರತಿಷ್ಠಿಸಿಕೊಂಡಿದ್ದಾರೆ ಎಂಬುದನ್ನು ಅವರ ಬಾಪ್ತಿಸ್ಮ ತೋರಿಸಿತೋ? ಅವರ ತಿಳುವಳಿಕೆ ಹಾಗೂ ಅವರ ಹೃದಯಗಳ ಪರಿಸ್ಥಿತಿ ಏನೇ ಇದ್ದರೂ ಅವರ ಪಾಪಗಳನ್ನು ತೊಳೆಯಲು ಅವರ ಬಾಪ್ತಿಸ್ಮಕ್ಕೆ ಬಲವು ಇತ್ತೋ?

ಕೇವಲ ಧಾರ್ಮಿಕ ಆಚರಣೆಗಿಂತ ಹೆಚ್ಚಿನದು ಯೋಹಾನನ ಬಾಪ್ತಿಸ್ಮಕ್ಕೆ ಬೇಕಾಗಿತ್ತು. ಯೋಹಾನನ ಬಾಪ್ತಿಸ್ಮವನ್ನು ಹಗುರವಾಗಿ ತೆಗೆದುಕೊಂಡವರು ದೇವರ ಉಪದೇಶವನ್ನು ಹಗುರವಾಗಿ ತೆಗೆದುಕೊಂಡರು, ಯಾಕಂದರೆ ಅವನ ಬಾಪ್ತಿಸ್ಮವನ್ನು ತಿರಸ್ಕರಿಸಿದವರು, "ಯೋಹಾನನಿಂದ ಬಾಪ್ತಿಸ್ಮ ಮಾಡಿಸಿಕೊಳ್ಳದೇ ಹೋದದ್ದರಲ್ಲಿ ತಮ್ಮ ವಿಷಯವಾಗಿ ದೇವರ ಸಂಕಲ್ಪವನ್ನು ನಿರಾಕರಿಸಿದರು" (ಲೂಕ 7:30). ಇತರರು ಯೋಹಾನನ ಬಾಪ್ತಿಸ್ಮವನ್ನು ಸ್ವೀಕರಿಸುವದರಿಂದ ದೇವರು ನೀತಿವಂತನೆಂದು ಒಪ್ಪಿಕೊಂಡರು (ಲೂಕ 7:29). ಸರಿಯಾಗಿ ಅರ್ಥಮಾಡಿಕೊಂಡು ವಿಧೇಯರಾಗುವ ಬಾಪ್ತಿಸ್ಮವು ಮನುಷ್ಯನ ಆಜ್ಞೆಗೆ ಪ್ರತ್ಯುತ್ತರವಾಗಿರುವದಿಲ್ಲ, ಆದರೆ ದೇವರ ಆಜ್ಞೆಗೆ ಪ್ರತ್ಯುತ್ತರವಾಗಿದೆ. ಯೋಹಾನನ ಬಾಪ್ತಿಸ್ಮಕ್ಕೆ ಉತ್ತರ ಕೊಡದಿದ್ದವರು ಮನುಷ್ಯನ ಉಪದೇಶವನ್ನು ತಿರಸ್ಕರಿಸಲಿಲ್ಲ ಆದರೆ ದೇವರ ಉಪದೇಶವನ್ನು ತಿರಸ್ಕರಿಸಿದರು. ದೇವರು ಕೇಳಿದ್ದನ್ನು ಸ್ವೀಕರಿಸುವದರಲ್ಲಿ, ಪಾಪಗಳ ಕ್ಷಮಾಪಣೆಗಾಗಿ ಮಾನಸಾಂತರದ ಬಾಪ್ತಿಸ್ಮವನ್ನು ಸ್ವೀಕರಿಸುವದರಲ್ಲಿ ಅವರು ಸೋತು ಹೋದರು.

## ಯೋಹಾನನ ಬಾಪ್ತಿಸ್ಮದ ಫಲಿತಾಂಶ

ಬರಿದಾದ ಧರ್ಮಾಚರಣೆಯು ಉದ್ದೇಶ ಪೂರಿತವಾದ ಹೃದಯ ಪ್ರೇರಣೆಯ ಸುಧಾರಣೆಗಿಂತ - ಭಿನ್ನವಾದ ಪರಿಣಾಮ ಹೊಂದುತ್ತದೆ. ಯೋಹಾನನ ಬೋಧನೆಗೆ ಉತ್ತರವಾಗಿ ಕೇವಲ ಬಾಪ್ತಿಸ್ಮದ ಕಾರ್ಯವು ಹೃದಯದ ಮೇಲೆ ಯಾವುದೇ ಪರಿಣಾಮವನ್ನು ಉಂಟು ಮಾಡುವದಿಲ್ಲ. ಮನುಷ್ಯನು ಒಪ್ಪಿಕೊಳ್ಳುವ ಯಾವುದೇ ಆಚರಣೆಯು ಅವನ ಜೀವಿತವನ್ನು ಅವಶ್ಯವಾಗಿ ಬದಲಾಯಿಸುವದಿಲ್ಲ.

ಮಾನಸಾಂತರಕ್ಕೆ ಜನರನ್ನು ತರುವ ಪ್ರಯತ್ನದಲ್ಲಿ ಯೋಹಾನನು ಬೋಧಿಸಿದನು.

ಅವರು ಬಾಪ್ತಿಸ್ಮ ಹೊಂದಿದ್ದು ಅವರನ್ನು ಮಾನಸಾಂತರಕ್ಕೆ ತರಲಿಲ್ಲ; ಬೋಧನೆಯು ಅವರನ್ನು ಮಾನಸಾಂತರಕ್ಕೆ ಪ್ರೇರೇಪಿಸಿತು (ಮತ್ತಾಯ 12:41) ಮತ್ತು ಮಾನಸಾಂತರವು ಅವರನ್ನು ಬಾಪ್ತಿಸ್ಮ ಹೊಂದಲು ಪ್ರೇರೇಪಿಸಿತು. ಮಾನಸಾಂತರಪಟ್ಟವರು ಅವನ ಬಾಪ್ತಿಸ್ಮಕ್ಕೆ ಒಪ್ಪಿಸಿಕೊಟ್ಟರು. ಮಾನಸಾಂತರಪಡದೇ ಇದ್ದವರು ಅವನ ಬಾಪ್ತಿಸ್ಮಕ್ಕೆ ತಮ್ಮನ್ನು ಒಪ್ಪಿಸಿಕೊಳ್ಳಲಿಲ್ಲ. ಇಲ್ಲವೇ ಮಾನಸಾಂತರದ ಕೊರತೆಯ ನಿಮಿತ್ತವಾಗಿ ಅವನ ಬಾಪ್ತಿಸ್ಮವನ್ನು ತಿರಸ್ಕರಿಸಿದರು.

ಫರಿಸಾಯರೂ ಸದ್ದುಕಾಯರೂ ಅವನ ಬಾಪ್ತಿಸ್ಮಕ್ಕೆ ಬಂದಾಗ ಹಾಗೂ ಮಾನಸಾಂತರ ಪಡದೇ ಇದ್ದಾಗ, ಅವರಿಗೆ ವಿರೋಧವಾಗಿ ಯೋಹಾನನು ಮಾತನಾಡಿದನು (ಮತ್ತಾಯ 3:7-9). ದೇವರಿಗೆ ವಿಧೇಯತೆಯಲ್ಲಿ ಬಾಪ್ತಿಸ್ಮವಷ್ಟನ್ನೇ ಅವನು ಬಯಸಿದ್ದರೆ ಅವನು ಅವರನ್ನು ಸ್ವೀಕರಿಸುತ್ತಿದ್ದನು. ಆದರೆ ಅವನು ಹುಡುಕುತ್ತಿದ್ದುದು ಬಾಪ್ತಿಸ್ಮವನ್ನಷ್ಟೇ ಅಲ್ಲ, ಅವರ ಪಾಪಗಳು ಕ್ಷಮಿಸಲ್ಪಡಲಿಕ್ಕಾಗುವಂತೆ ಅವರ ಬಾಪ್ತಿಸ್ಮದೊಂದಿಗೆ ಮಾನಸಾಂತರವನ್ನೂ ಅವನು ಹುಡುಕಿದನು (ಲೂಕ 3:3).

ಯೋಹಾನನು ಬಾಪ್ತಿಸ್ಮ ಮಾಡಿಸಿದ ಜನರು ಮಾನಸಾಂತರ ಪಡುತ್ತಿದ್ದ ಜನರಾಗಿದ್ದರು. ಅವರ ಮಾನಸಾಂತರದ ನಿಮಿತ್ತವಾಗಿ ಅವರು ಬಾಪ್ತಿಸ್ಮ ಹೊಂದಿದಾಗ ಅವರು ಕ್ಷಮಿಸಲ್ಪಡುವರು. ಕ್ಷಮಾಪಣೆಯು ಮಾನಸಾಂತರ ಮತ್ತು ಬಾಪ್ತಿಸ್ಮ ಎರಡರ ಮೇಲೂ ಅವಲಂಭಿಸಿತ್ತು. ಯಾಕಂದರೆ ಅದು ಪಾಪಗಳ ಕ್ಷಮಾಪಣೆಗಾಗಿ ಮಾನಸಾಂತರದ ಬಾಪ್ತಿಸ್ಮವಾಗಿತ್ತು.

ಅನೇಕರು ಯೋಹಾನನ ಬಾಪ್ತಿಸ್ಮವನ್ನು ಸ್ವೀಕರಿಸಿ ಅವನ ಅನುಯಾಯಿಗಳಾದರು (ಮತ್ತಾಯ 9:14; ಯೋಹಾನ 1:35; 3:25; 4:1). ಶಿಷ್ಯರನ್ನು ಮಾಡಿಕೊಳ್ಳುವದಲ್ಲಿ ಯೇಸುವನ್ನು ಮೀರಿಹೋಗುವ ಗುರಿ ಅವನದಾಗಿರಲಿಲ್ಲ. ಆದರೆ ತನ್ನ ಹಿಂಬಾಲಕರು ಯೇಸುವಿನ ಹಿಂಬಾಲಕರಾಗುವಂತೆ ಸಿದ್ಧಪಡಿಸುವುದು ಅವನ ಗುರಿಯಾಗಿತ್ತು. ಯೇಸುವು ವೃದ್ಧಿಯಾಗ ಬೇಕು, ತಾನು ಕಡಿಮೆ ಯಾಗಬೇಕು, ಅದೇ ತನಗೆ ಸಂತೋಷ ತರುವದೆಂದು ಅವನು ತನ್ನ ಶಿಷ್ಯರಿಗೆ ತಿಳಿಸಿದನು (ಯೋಹಾನ 3:25-30).

ಯೋಹಾನನ ಶಿಷ್ಯರಲ್ಲಿ ಅನೇಕರು ಯೇಸುವಿನ ಅನುಯಾಯಿಗಳಾದರು. ಅವರಲ್ಲಿ ಅಪೊಸ್ತಲ ಅಂದ್ರೇಯನು (ಯೋಹಾನ 1:35, 40) ಮತ್ತು ಬಹುಶಃ ಪೇತ್ರನು ಒಳಗೊಂಡಿದ್ದರು. ಯೋಹಾನನ ಬಾಪ್ತಿಸ್ಮವನ್ನು ಹೊಂದಿದ ಕೆಲವರಾದರೂ ಯೋಹಾನನ ಬಾಪ್ತಿಸ್ಮವು ಯೇಸುವಿನ ಕಡೆಗೆ ತೋರಿಸಿತೆಂದು ತಿಳಿಸಲ್ಪಟ್ಟಾಗ, ಅನಂತರದಲ್ಲಿ ಯೇಸುವಿನಿಂದ ಹೇಳಲ್ಪಟ್ಟ ಬಾಪ್ತಿಸ್ಮವನ್ನು ಹೊಂದಿಕೊಂಡರು (ಅಪೊಸ್ತಲರ ಕೃತ್ಯ 19:1-5).

## ಮುಕ್ತಾಯ

ಯೋಹಾನನ ಬಾಪ್ತಿಸ್ಮವು ದೇವರಿಗೆ ಕುರುಡು ವಿಧೇಯತೆಯ ಕಾರ್ಯದಂತೆ ಬೇಕಾಗಿದ್ದ ಒಂದು ಧಾರ್ಮಿಕ ಆಚರಣೆಯಾಗಿರಲಿಲ್ಲ (1) ತಮ್ಮ ಪಾಪಗಳನ್ನು ಅರಿತುಕೊಂಡವರಾಗಿ, (2) ತಮ್ಮ ಪಾಪಗಳನ್ನು ಅರಿಕೆ ಮಾಡುತ್ತಿರುವವರಿಗಾಗಿ, (3) ತಮ್ಮ ಪಾಪಗಳ ಕ್ಷಮಾಪಣೆಯನ್ನು ಹುಡುಕುತ್ತಿದ್ದವರಿಗಾಗಿ, (4) ಬೇಗನೇ ಪ್ರತ್ಯಕ್ಷ ವಾಗಲಿಕ್ಕಿದ್ದ ಮೆಸ್ಸೀಯನನ್ನು ಕುರಿತಾದ ಉಪದೇಶವನ್ನು ಸ್ವೀಕರಿಸುವವರಿಗಾಗಿ, ಹಾಗೂ (5) ಮೆಸ್ಸೀಯನ ಬರಲಿಕ್ಕಿದ್ದ ರಾಜ್ಯಕ್ಕಾಗಿ ಸಿದ್ಧತೆಯಲ್ಲಿ ನೀತಿಯ ಜೀವನ ನಡಿಸಲು ತೀರ್ಮಾನಿಸಿ ಕೊಳ್ಳುವವರಿಗಾಗಿ, ಯೋಹಾನನ ಬಾಪ್ತಿಸ್ಮವಿತ್ತು. ಯೋಹಾನನ ಬಾಪ್ತಿಸ್ಮವು ಬರಿದಾದ ಧಾರ್ಮಿಕ ಆಚರಣೆ ಯಾಗಲೀ ಇಲ್ಲವೇ ಅರ್ಥವಿಲ್ಲದ

ಆಚರಣೆಯಾಗಲೀ ಆಗಿರಲಿಲ್ಲ. ಯೋಹಾನನ ಬಾಪ್ತಿಸ್ಮಕ್ಕಾಗಿ ಬಂದವರು ತಮ್ಮ ಕಾರ್ಯವು ಸರಿಯಾದ ಉದ್ದೇಶ ದೊಂದಿಗೆ ಮತ್ತು ಹೃದಯದ ಅಪೇಕ್ಷೆಯೊಂದಿಗೆ ಇರಬೇಕೆಂಬುದನ್ನು ತಿಳಿದುಕೊಳ್ಳ ಬೇಕಾಗಿತ್ತು.

© 2009 Truth for Today